# Raamanaamaavembo naamava nenedare

Kannada lyrics on top, English singing lyrics below

## Kannada

ರಾಮನಾಮಾವೆಂಬೊ ನಾಮವ ನೆನೆದರೆ ಭಯವಿಲ್ಲ ಮನಕೆ!2!ಮೂರು ಲೋಕಕೆ ಕಾರಣ ಕರ್ತಾ ನಾರಾಯಣ ಜಗಕೆ ಶ್ರೀಮನ್ ನಾರಾಯಣ ಜಗಕೆ! ರಾಮನಾಮಾವೆಂಬೊ!

ಮತ್ಸ್ಯಾವತಾರವ ತಾಳಿದ ರಾಮ ವೇದವ ತರುವುದಕೆ !2!ಬೆಟ್ಟವ ಬೆನ್ನಲಿ ಪೊತ್ತಿದ ರಾಮ ಕೂರ್ಮಾವತಾರಕ್ಕೆ! ! ರಾಮನಾಮಾವೆಂಬೊ!

ನೀರೊಳು ಮುಳುಗಿದ ಭೂಮಿಯ ಪೊತ್ತು ವರಾಹವತಾರಕ್ಕೆ!2!ಕರುಳನು ಬಗೆದು ಮಾಲೆಯ ಧರಿಸಿದ ಪ್ರಹ್ಲಾದ ಸಲಹುದಕೆ |!ರಾಮನಾಮಾವೆಂಬೊ!

ಭೂಮಿಯದಾನವ ಬೇಡಿದ ರಾಮ ವಾಮನವತಾರಕ್ಕೆ!2!ತಾಯಿಯ ಶಿರವನು ಕಡಿದನು ರಾಮ ಭಾರ್ಗವತಾರಕ್ಕೆ |! ರಾಮನಾಮಾವೆಂಬೊ!

ವನವಾಸವ ಮಾಡಿದ ರಾಮ ಜನಕನ ವಾಕ್ಯಕ್ಕೆ!2!ಮಾವ ಕಂಸನ ಕೊಂದನು ಕೃಷ್ಣ ತಾಯಿಯ ಬಿಡಿಸಲಿಕ್ಕೆ!! ರಾಮನಾಮಾವೆಂಬೊ!

ಸತಿಯರ ವ್ರತಗಳ ಕೆಡಿಸಿದ ರಾಮ ತ್ರಿಪುರ ಗೆಲುವುದಕೆ !2!ವಾಹನ ಬಿಟ್ಟು ತುರಗವನೇರಿದ ಕಲ್ಕ್ಯಾವತಾರಕ್ಕೆ!! ರಾಮನಾಮಾವೆಂಬೊ!

ಶ್ಯಾಮಲ ವರ್ಣವ ತಾಳಿದ ರಾಮ ಸಮರ್ಥನು ಜಗಕೆ !2!ಸ್ವಾಮಿ ಶ್ರೀ ಪುರಂದರ ವಿಠ್ಠಲನು ರಾಮ ಗೋವಿಂದನು ಜಗಕೆ |!ರಾಮನಾಮಾವೆಂಬೊ!

---

## English

Raamanaamaavembo naamava nenedare bhayavilla manake | ||2|| | mooru lokake kaarana kartaa naaraayana jagake shreeman naaraayana jagake! raamanaamaavembo!

Matsyaavataarava taalida raama vedava taruvudake | ||2|| | bettava bennali pottida raama koormaavataarakke! !raamanaamaavembo!

Neerolu mulugida bhoomiya pottu varaahavataarakke | ||2|| | karulanu bagedu maaleya dharisida prahlaada salahudake |!raamanaamaavembo!

Bhoomiyadaanava bedida raama vaamanavataarakke | ||2|| | taayiya shiravanu kadidanu raama bhaargavataarakke |!raamanaamaavembo!

Vanavaasava maadida raama janakana vaakyakke | ||2|| | maava kamsana komdanu krushna taayiya bidisalikke || raamanaamaavembo!

Satiyara vratagala kedisida raama tripura geluvudake | ||2|| | vaahana bittu turagavanerida kalkyaavataarakke || raamanaamaavembo!

Shyaamala varnava taalida raama samarthanu jagake | ||2|| | svaami shree puramdara viththalanu raama govimdanu jagake |!raamanaamaavembo!